ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಶ್ರೀರಂಗಪಟ್ಟಣ

**ಸಿಸಿ 37/2017 ಸಿಡಬ್ಲ್ಯೂ: 12 ಪಿ ಡಬ್ಲ್ಯೂ: 12**

ದಿನಾಂಕಃ 23.04.2025 ರಂದು ಸಾಕ್ಷಿಗೆ ಪ್ರಮಾಣ ವಚನ ನೀಡಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ

ಚಾಸಾ 6 ರವರ ಎಕ್ಸ್ ರೇ ಅನ್ನು ಹಾಜರುಪಡಿಸಿದ್ದು, ಅದನ್ನು ನಿಪಿ 16 ಎಂದು ಗುರುತಿಸಲಾಗಿದೆ. ಎಕ್ಸ್ ರೇ ರಿಪೋರ್ಟನ್ನು ನಿಪಿ 17 ಎಂದು ಗುರುತಿಸಲಾಗಿದೆ. ಸಾಕ್ಷಿ ನಿಪಿ 11 ಅನ್ನು ನೋಡಿ ತಮ್ಮ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿ 11(ಬಿ) ಎಂದು ಗುರುತಿಸಲಾಗಿದೆ. ಸಾಕ್ಷಿ ನಿಪಿ 12 ಅನ್ನು ನೋಡಿ ತಮ್ಮ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿ 12(ಬಿ) ಎಂದು ಗುರುತಿಸಲಾಗಿದೆ. ಸಾಕ್ಷಿ ನಿಪಿ 13 ಅನ್ನು ನೋಡಿ ತಮ್ಮ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿ 13(ಬಿ) ಎಂದು ಗುರುತಿಸಲಾಗಿದೆ. ಸಾಕ್ಷಿ ನಿಪಿ 14 ಅನ್ನು ನೋಡಿ ತಮ್ಮ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿ 14(ಬಿ) ಎಂದು ಗುರುತಿಸಲಾಗಿದೆ.

ಪಾಟೀ ಸವಾಲುಃ ಆರೋಪಿ ಪರಃ ಶ್ರೀ ಸಿ ಪಿ ಎಂ ವಕೀಲರಿಂದಃ

ನಾನು forensic specialist ಎಂದರೆ ಸರಿ. ನಾನು ಮೂಳೆಗೆ ಸಂಬಂಧಿಸಿದಂತೆ ಯಾವುದೇ ಚಿಕಿತ್ಸೆ ನೀಡುವುದಿಲ್ಲ. ನಾನು ಮೂಳೆಗಳ ಬಗ್ಗೆ ಹೇಳಲು ತಜ್ಞನಲ್ಲ ಎಂದರೆ ಸರಿ. ನಿಪಿ 11 ರಿಂದ 14 ರಲ್ಲಿ ಚಾಸಾ 1, 3 ರಿಂದ 6 ರವರಿಗೆ ಯಾರು ಹಲ್ಲೆ ಮಾಡಿದ್ದಾರೆ ಎಂದು ತಿಳಿಸಿಲ್ಲ ಎಂದರೆ ಸರಿ. ಸಾಕ್ಷಿ ರಿಜಿಸ್ಟರ್ ನಲ್ಲಿ ತಿಳಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಗಾಯದ ವಯಸ್ಸನ್ನು ತಿಳಿಸಿಲ್ಲ ಎಂದರೆ ಸರಿ. ಸಾಕ್ಷಿ ಆದರೆ ರಕ್ತದ ಕಲೆಗಳ ಬಗ್ಗೆ ತಿಳಿಸಿದ್ದು, ಅದು fresh

wound ಎಂದು ತಿಳಿದು ಬರುತ್ತದೆ ಎಂದು ನುಡಿಯುತ್ತಾರೆ. Tenderness and swelling ಒಂದೇ ಕಡೆ ಕುಳಿತಾಗ, ಪ್ರಯಾಣ ಮಾಡಿದಾಗ, ಹೆಚ್ಚಿಗೆ ಕೆಲಸ ಮಾಡಿದಾಗ ಆಗುತ್ತದೆ ಎಂದರೆ ಸರಿ. ಹರಿದ ಗಾಯಗಳು ಯಾವುದಾದರೂ ಗಟ್ಟಿ ವಸ್ತುವಿನ ಜೊತೆ ಸಂಪರ್ಕ ಬಂದಾಗ ಆಗುತ್ತದೆ. ಚಾಸಾ 6 ರವರಿಗೆ hairline fracture ಆಗಿದೆ ಎಂದು ತಿಳಿಸಿದ್ದು, ನಾನು ಅದರ ಬಗ್ಗೆ ಪ್ರಥಮ ಚಿಕಿತ್ಸೆಯನ್ನು ಮಾತ್ರ ನೀಡಿರುತ್ತೇನೆ. ಸಾಕ್ಷಿ ಮುಂದುವರೆದ ನಂತರ ತಜ್ಞ ವೈದ್ಯರಿಗೆ ರೆಫರ್ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ತಜ್ಞ ವೈದ್ಯರಿಗೆ ರೆಫರ್ ಮಾಡಿದ ದಾಖಲಾತಿ ಇಲ್ಲ ಎಂದರೆ ಸರಿ. ತಜ್ಞ ವೈದ್ಯರು hairline fracture ಬಗ್ಗೆ ಯಾವುದೇ ದಾಖಲಾತಿ ನೀಡಿಲ್ಲ ಎಂದರೆ ಸಾಕ್ಷಿ ಎಕ್ಸ್ ರೇ ಮತ್ತು ತಜ್ಞ ವೈದ್ಯರ ರಿಪೋರ್ಟ್ ನೀಡಿರುತ್ತಾರೆ. ತಜ್ಞ ವೈದ್ಯರು ಯಾವುದೇ ಚಿಕಿತ್ಸೆ ನೀಡದೇ ಇರುವ ಕಾರಣಕ್ಕೆ ನಾನು ಅದಕ್ಕೆ ಸಂಬಂಧಿಸಿದಂತೆ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಯಾವುದೇ ರೀತಿ ಗಾಯಗಳು ಹಲ್ಲೆಯಿಂದ ಆಗದೇ ಇದ್ದರೂ ಸಹ ನಾನು ಸುಳ್ಳು ಗಾಯದ ಪ್ರಮಾಣಪತ್ರವನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಎಕ್ಸ್ ರೇ ಮತ್ತು ತಜ್ಞ ವೈದ್ಯರ ರಿಪೋರ್ಟ್ ಅನ್ನು ಕೇಸಿಗೆ ಅನುಕೂಲವಾಗಲಿ ಎಂದು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

*ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.*

*ಓ ಹೇ ಕೆ ಸ ಇ ಒ*

*ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು*

*ಶ್ರೀರಂಗಪಟ್ಟಣ.*